

**ಎಂ.ಎಸ್. ಶೀಲಾ**

**ಶಾಸ್ತ್ರೀಯ ಗಾಯಕಿ**

# ಇಷ್ಟು ದೊರಕಿದರೆ ಮತ್ತಷ್ಟು ಬೇಕೆಂಬಾಸೆ.!

ನಮ್ಮ ದೇಶದಲ್ಲಿ ಮಹಿಳೆಯರು ಸ್ವತಂತ್ರರಾಗಿದ್ದಾರೆ. ಹಿಂದೆ ಬ್ರಿಟಿಷರ ಕಾಲದಲ್ಲಿ ಮಹಿಳೆಯರಿಗೆ ಬಹಳ ಕಷ್ಟ, ತೊಂದರೆ ಇತ್ತು ಅಂತ ಹೇಳೋದು ಕೇಳಿದ್ದೀನಿ. ಆದ್ರೆ ಈಗ ಮಹಿಳೆ ತುಂಬ ಮುಂದೆ ಬಂದಿದ್ದಾಳೆ. ಇಂದು ಮಹಿಳೆಗೆ ಸ್ವಾತಂತ್ರ್ಯ ಎಷ್ಟಿದೆ ಅಂತ ತುಲನೆ ಮಾಡಕ್ಕಾಗಲ್ಲ. ಒಂದಂತೂ ನಿಜ. ಹೆಣ್ಣು ಇಲ್ಲದೆ ಪ್ರಪಂಚ ನಡೆಯಲ್ಲ. ಮನೆಯಲ್ಲಿ ಮಗಳಾಗಿ, ತಾಯಿಯಾಗಿ, ಮಡದಿಯಾಗಿ, ಅತ್ತೆಯಾಗಿ ಸಂಸಾರದ ಸಮಸ್ತ ಜವಾಬ್ದಾರಿಗಳನ್ನು ನಿಭಾಯಿಸುವ ಹೆಣ್ಣು ಇಂದು ಆರ್ಥಿಕವಾಗಿಯೂ ಸ್ವಾವಲಂಬಿಯಾಗಿದ್ದಾಳೆ. ಆದರೂ ಸಮಾಜದಲ್ಲಿ ಹೆಣ್ಣೆಂದರೆ ಇಷ್ಟೊಂದು ತಾತ್ಸಾರ ಯಾಕೆ ಎಂಬುದೇ ಅರ್ಥವಾಗ್ತಿಲ್ಲ.

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಎಲ್ಲಿ ತನ್ನಿಂದ ಮೇಲೆ ಹೋಗ್ತಾಳೋ ಎನ್ನುವ ಭಯ ಪುರುಷರಿಗೆ ಈಗಲೂ ಇರಬಹುದು. ವೃತ್ತಿಯಲ್ಲೂ ಅಷ್ಟೆ, ಒಬ್ಬರನ್ನೊಬ್ಬರು ಗೌರವಿಸಿದರೆ ಮೇಲು ಕೀಳು ಎಂಬುದು ಇರಲ್ಲ.

ನಾನೊಬ್ಬ ಗಾಯಕಿ, ನನ್ನಲ್ಲಿ ಸಂಗೀತ ಕಲೆಯನ್ನು ಬೆಳೆಸಿ, ಅದನ್ನು ಪೋಷಿಸಿದವರು ನನ್ನ ತಾಯಿ. ತಂದೆ–ತಾಯಿಯರ ಸಹಕಾರದಿಂದಲೇ ನಾನು ಇಂದು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದೀನಿ. ಉತ್ತಮ ಗುರು (ದಿ.ಆರ್.ಕೆ. ಶ್ರೀಕಂಠನ್) ಅವರಿಂದ ಸಂಗೀತ ಕಲಿತು ಹಲವಾರು ಮಜಲುಗಳನ್ನು ದಾಟಿ ಬಂದಿದ್ದೀನಿ. ನನ್ನ ಇಷ್ಟು ವರ್ಷಗಳ ಪ್ರಯತ್ನದ ಫಲ ಗಂಡನ ಮನೆಗೆ ಬಂದ ಮೇಲೂ ಸಾಕಾರಗೊಂಡಿದೆ. ಮದುವೆ ಆದ ಮೇಲೂ ನನಗೆ ಯಾವುದೇ ನಿರ್ಬಂಧ ಇರಲಿಲ್ಲ. ವೇದಿಕೆ ಏರಬಾರದು, ಸಂಗೀತ